ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ ಸ್ಥಾಪಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444
ಸಂಪುಟ-21 ಸಂಚಿಕೆ-11 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ದೇವಸ್ಥಾನದಲ್ಲಿ ವಿಜಯದಶಮಿಯಂದು ಚಂಡಿಕಾಯಾಗ




ದಿನಾಂಕ 15–10–2021ರ ಶುಕ್ರವಾರ ವಿಜಯದಶಮಿಯ ದಿನ ನಮ್ಮ ಸಂಘದಲ್ಲಿ ಪ್ರತಿವರ್ಷದಂತೆ ಮಹಾಚಂಡಿಕಾಯಾಗ ನೆರವೇರಿತು. ಮುಂಜಾನೆ ದೇವಸ್ಥಾನದಲ್ಲಿ ಕದಿರು ಕಟ್ಟುವ ಕಾರ್ಯಕ್ರಮ ಜರುಗಿತು. ತದನಂತರ ಚಂಡಿಕಾಯಾಗದ ಪ್ರಾರ್ಥನೆ ಹಾಗೂ ಪೂರ್ಣಾಹುತಿ, ಮಹಾಪೂಜೆ ನೆರವೇರಿತು. ಶ್ರೀ ಜಗದೀಶ್ ಉಪಾಧ್ಯಾಯ ನೇತೃತ್ವದ ವೈದಿಕರು ಚಂಡಿಕಾಯಾಗದ ಧಾರ್ಮಿಕ ವಿಧಿವಿಧಾನಗಳನ್ನು ಸುಸೂತ್ರವಾಗಿ ನೆರವೇರಿಸಿದರು. ಶ್ರೀಮತಿ ಅನುಸೂಯಾ ಹಾಗೂ ಶ್ರೀ ಪದ್ಮಾನಂದ ರಾವ್ ಯಾಗದ ಕರ್ತೃಗಳಾಗಿದ್ದರು. ಸುಮಾರು 600ಕ್ಕೂ ಮಿಕ್ಕಿ ಸಮಾಜಬಾಂಧವರು ಹಾಗೂ ಸ್ಥಳೀಯ ಭಕ್ತಾಧಿಗಳು ಭೋಜನ ಪ್ರಸಾದವನ್ನು ಸ್ವೀಕರಿಸಿದರು. ನಂತರ ಸಂಜೆ ಶ್ರೀ ಶಾರದಾ ಹವ್ಯಾಸಿ ಯುಕ್ಷಗಾನ ಕಲಾವಿದರಿಂದ "ದಕ್ಷಯಜ್ಞ ಮತ್ತು ಗಿರಿಜಾ ಕಲ್ಯಾಣ" ಪ್ರಸಂಗ ಸಂಜೆ ಶ್ರೀಶಾರದಾ ಮಂಟಪದಲ್ಲಿ ಸಂಪನ್ನಗೊಂಡಿತು.

## ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ : ಪ್ರಥಮ ವಾರ್ಷಿಕೋತ್ಸವ



ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ ಮಂಗಳೂರು ಇದರ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮವು ತಾ.23.10.2021ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಸಂಪನ್ನಗೊಂಡಿತು. ಪ್ರಾತಃ ಕಾಲದಲ್ಲಿ ತ್ರಿನಾಳಿಕೇರ ಗಣಯಾಗ ಹಾಗೂ ಶ್ರೀ ಗಾಯತ್ರಿ ಯಾಗದೊಂದಿಗೆ ಆರಂಭಗೊಂಡು ಮಹಾ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತು. ಶ್ರೀ ಶಾರದಾ ಮಂಟಪದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ದಂಪತಿಗಳು ಯಾಗದ ಪವಿತ್ರಪಾಣಿಯಾಗಿ ತಮ್ಮನ್ನು ತೊಡಗಿಸಿಕೊಂಡು ಸಂಪೂರ್ಣ ಸಹಕಾರ ನೀಡಿದರು. ವೇದಬ್ರಹ್ಮ ಜಗದೀಶ ಉಪಾಧ್ಯಾಯರು ಹಾಗೂ ವೇದಬ್ರಹ್ಮ ಕೃಷ್ಣರಾಜ್ ಭಟ್ಟರ ವೇದಘೋಷ, ಮಾತೆಯರ ಪ್ರಾರ್ಥನೆ ಹಾಗೂ ವೇದಬ್ರಹ್ಮ ಪ್ರತಾಪ್ ಶರ್ಮಾ ಮತ್ತು ವೇದಬ್ರಹ್ಮ ಅರವಿಂದ ಶರ್ಮಾ ಇವರ ಗುರುವಂದನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಅಭ್ಯಾಗತರ ಕಿರುಪರಿಚಯ ಸ್ವಾಗತ ವಚನದೊಂದಿಗೆ ಪ್ರಾಸ್ತಾವಿಕ ಭಾಷಣವನ್ನು ಸಂಘದ ಅಧ್ಯಕ್ಷರಾದ ವೇದಮೂರ್ತಿ ಶ್ರೀ ಗುರುಪ್ರಸಾದ್ ಹೆಬ್ಬಾರ್ ನೆರವೇರಿಸಿದರು. ಕಾರ್ಯದರ್ಶಿ ವೇದಮೂರ್ತಿ ಶ್ರೀ ಚಿದಾನಂದ ಶ್ಯಾನುಭೋಗರು ವರದಿವಾಚನಗೈದರು. ಪ್ರಧಾನ ಉಪನ್ಯಾಸಕರಾದ ಶ್ರೀ ನಟರಾಜ್ ರಾವ್ ಪರ್ಕಳ ಇವರು ಗಾಯತ್ರಿ ಅನುಷ್ಠಾನದ ಬಗ್ಗೆ ಮನಮುಟ್ಟುವಂತೆ ವಿವರಿಸಿದರು. ಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾದ ಬೆಳುವಾಯಿ ದೇವಾನಂದ್ ಭಟ್ ಸಂಘಕ್ಕೆ ಶುಭ ಹಾರೈಸಿ ಅಗತ್ಯ ಮಾರ್ಗದರ್ಶನವನ್ನು ನೀಡಿದರು. ಶ್ರೀ ಮಂಜುನಾಥ ಹೆಬ್ಬಾರ್ ಸಂಘಕ್ಕೆ ಪ್ರೋತ್ಸಾಹ ನೀಡಿ ಶುಭ ಹಾರೈಸಿದರು. ಶೃಂಗೇರಿ ಮಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ವೇದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ಬ್ರಾಹ್ಮಣ್ಯ ಹಾಗೂ ಬ್ರಾಹ್ಮಣರ ಕರ್ತವ್ಯದ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಿದರು. ಗೌರವಾಧ್ಯಕ್ಷ ವೇದಾಂತ ಶಿರೋಮಣಿ ಭವಾನಿಶಂಕರ ಉಪಾಧ್ಯಾಯರು ಉಪಸ್ಥಿತರಿದ್ದರು. ವೇದಬ್ರಹ್ಮ ಅರವಿಂದ ಶರ್ಮಾ ಬೆಳ್ಳೆ ವಂದಿಸಿದರು. ವೇದಮೂರ್ತಿ ಜಗದಾಭಿರಾಮ ಕಾರ್ಯಕ್ರಮ ನಿರೂಪಿಸಿದರು. ಈ ಕಾರ್ಯಕ್ರಮವನ್ನು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ ಇವರು ವ್ಯವಸ್ಥಿತವಾಗಿ ಆಯೋಜಿಸಿದ್ದು, ಸಂಘದ ಕೋಶಾಧಿಕಾರಿ ಶ್ರೀ ಬಿ. ಜಯರಾಮರಾವ್, ಕಾರ್ಯಕ್ರಮದ ನಮ್ಮ ಸಂಘದ ಪ್ರತಿನಿಧಿ ಶ್ರೀ ಸುರೇಶ್ ಕುತ್ಪಾಡಿ, ಪ್ರಭಾರ ಕಾರ್ಯದರ್ಶಿ ಪ್ರಭಾಕರ ಭಂಡಿ, ಸಂಘದ ಮೆನೇಜರ್ ಅಜಿತ್ ರಾವ್, ಸಹಾಯಕ ಮೆನೇಜರ್ ನಾಗಭೂಷಣ ರಾವ್ ಇವರು ಸಹಕರಿಸಿದ್ದರು.

## ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾಗಿ ಪ್ರದೀಪ್ ಕುಮಾರ್ ಪಂಜ



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಉಪಾಧ್ಯಕ್ಷ ಮತ್ತು ಕರ್ನಾಟಕ ಬ್ಯಾಂಕಿನ ಸ್ವತಂತ್ರ ನಿರ್ದೇಶಕರಾಗಿದ್ದ ಪ್ರದೀಪ್ ಕುಮಾರ್ ಪಂಜ ಅವರನ್ನು ಅರೆಕಾಲಿಕ ಅಧ್ಯಕ್ಷರನ್ನಾಗಿ ನವೆಂಬರ್ 14.11.2021ರಿಂದ ಅನ್ವಯವಾಗುವಂತೆ ಮೂರು ವರ್ಷಗಳ ಅವಧಿಯ ನೇಮಕಾತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಾಗಿ (ಕಾರ್ಪೋರೇಟ್ ಬ್ಯಾಂಕಿಂಗ್) ಪ್ರದೀಪ್ ಕುಮಾರ್ ನಿವೃತ್ತರಾಗಿದ್ದಾರೆ. ಇದಕ್ಕೂ ಮೊದಲು ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್‌ನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಹಲವು ವರ್ಷ ನಿರ್ವಹಿಸಿದ್ದರು. ಎಸ್.ಬಿ.ಐ. ಜೊತೆಗಿನ 39 ವರ್ಷಗಳ ಒಡನಾಟದಲ್ಲಿ ಕಾರ್ಪೋರೇಟ್ ಮತ್ತು ಅಂತರಾಷ್ಟ್ರೀಯ ಬ್ಯಾಂಕಿಂಗ್, ಖಜಾನೆ ನಿರ್ವಹಣೆ, ಮಾಹಿತಿ ತಂತ್ರಜ್ಞಾನ, ರಿಟೇಲ್ ಬ್ಯಾಂಕಿಂಗ್, ವಹಿವಾಟು ಬ್ಯಾಂಕಿಂಗ್, ಕಾರ್ಯತಂತ್ರದ ಯೋಜನೆ, ವ್ಯಾಪಾರ ಅಭಿವೃದ್ಧಿ, ಅಪಾಯ ನಿರ್ವಹಣೆ ಸೇರಿದಂತೆ ಬ್ಯಾಂಕಿನ ವಿವಿಧ ಕ್ಷೇತ್ರಗಳಲ್ಲಿ ಅನುಭವವನ್ನು ಹೊಂದಿದ್ದಾರೆ.



ಶ್ರೀಮತಿ ಆಶಾ ಹಾಗೂ ಶ್ರೀ ಅರವಿಂದ ಕುಮಾರ್ ದಂಪತಿಗಳು ಹಾಗೂ ಮಕ್ಕಳು ಶ್ರೀ ಶಾರದಾ ದೇವಿಗೆ ಅಂದಾಜು ರೂ.45,000/– ಮೊತ್ತದ ಜಿಲೇಬಿ ಸರವನ್ನು ಅರ್ಪಿಸಿದರು.



ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.

# ಒಳಗಿನ ಹಣತೆ ಹಚ್ಚಿರೋ

**ದುರ್ಗೆಯ ಉಪಾಸನೆಯಲ್ಲಿ 3 ಕವಲುಗಳು – ಶಾಕ್ತರ ದುರ್ಗೆ, ಶೈವರ ದುರ್ಗೆ ಮತ್ತು ವೈಷ್ಣವರ ದುರ್ಗೆ :** ಶಾಕ್ತರ ದುರ್ಗೆ ಶಿವನಿಗೂ ಆಸರೆಯಾದ ಪರಾಶಕ್ತಿ. ಇವಳಿಂದಲೇ, ಬ್ರಹ್ಮ, ವಿಷ್ಣು, ಮಹೇಶ್ವರರು ಜನಿಸಿ ಬಂದರು. ಇವಳು ಎಲ್ಲರ ತಾಯಿ ; ಶ್ರೀಮಾತಾ, ಶ್ರೀ ಜಗನ್ಮಾತಾ. ಎರಡನೆಯ ಉಪಾಸನೆ ಶೈವರ ದುರ್ಗೆಯರು. ಇವಳು ಶಿವನ ಪಾರ್ವತಿ. ಶೈವರಿಗೆ ಹೇಗೆ ಹಾಗೆ ವೈಷ್ಣವರಿಗೂ ಇಷ್ಟವಾದ ಉಪಾಸನೆಯಾಯಿತು. ವೈಷ್ಣವ ಸಿದ್ಧಾಂತ ಅನುಸಾರ ಶಿವ ಮನಸ್ಸಿನ ದೇವತೆ, ಪಾರ್ವತಿ ಮಾತಿನ ದೇವತೆ. ನಮ್ಮ ಮಾತು–ಮನಸ್ಸುಗಳು ಭಗವಂತನತ್ತ ಹರಿಯಲು ಕಾಯೇನ ವಾಚಾ ಮನಸಾ ಭಗವಂತನನ್ನು ಒಲಿಸಲು, ತ್ರಿಕರಣ ಶುದ್ಧಿಯಿಂದ ಭಗವಂತನನ್ನು ಪೂಜಿಸಲು ನೆರವೀಯುವ ದಂಪತಿಗಳು ಶಿವ–ಪಾರ್ವತಿಯರು. ಮೂರನೆಯ ಉಪಾಸನೆ ವೈಷ್ಣವರ ದುರ್ಗೆಯರು. ಇವಳು ವಿಷ್ಣು ಪತ್ನಿ ಶ್ರೀ ಭೂ ದುರ್ಗಾ ಎಂಬ ಲಕ್ಷ್ಮೀಯ ಮೂರು ರೂಪಗಳಲ್ಲಿ ತಮೋಮಾನಿನಿಯಾದ ಸಂಹಾರ ಶಕ್ತಿಯಾದ ಮೂರನೇ ರೂಪ. ಇವಳೇ ಕೃಷ್ಣಾವತಾರದಲ್ಲಿ ಹರಿಯ ತಂಗಿಯಾಗಿ ಯಶೋಧರೆಯ ಮಗಳಾಗಿ ಜನಿಸಿ ದುರ್ಗೆ ಕಂಸನ ಕೈಯಿಂದ ಜಾರಿ ಮುಗಿಲಿಗೆ ಹಾರಿ ನಿಂತ ವಿಷ್ಣುಮಾಯೆ. ಇವಳೆ ಮಹಿಷಮರ್ದಿನಿಯು. ನಾಡಿನಾದ್ಯಂತ ಪೂಜೆಗೊಳ್ಳುವವಳು.

**ಬಣ್ಣದ ಬೆಳಕಿನ ದೀಪಾವಳಿ ಬಂತು :**

**ಬಿ.ಎಂ.ಶ್ರೀಯವರು ಕರುಣಾಳು ಬೆಳಕಿಗೆ ಸಲ್ಲಿಸುವ ಪ್ರಾರ್ಥನೆ ಹೀಗಿದೆ.**

*ಕರುಣಾಳು ಬಾ ಬೆಳಕೆ,*
*ಮುಸುಕಿದೀ ಮಬ್ಬಿನಲಿ*
*ಕೈ ಹಿಡಿದು ನಡೆಸೆನ್ನನು*
*ಇರುಳು ಕತ್ತಲೆಯ ಗವಿ; ಮನೆದೂರ;*
*ಕನಿಕರಿಸಿ*
*ಕೈಹಿಡಿದು ನಡೆಸೆನ್ನನು*
*ಕೇಳೆ ನನ್ನಡಿಯಿಡಿಸು; ಬಲುದೂರ*
*ನೋಟವನು*
*ಕೇಳೆನೊಡನಯೆ*
*ಸಾಕು ನನಗೊಂದು*
*ಹೆಜ್ಜೆ.*

**ಪ್ರೊ| ಚಂದ್ರಶೇಖರ ಪಾಟೀಲರು ದೀಪಾವಳಿಯನ್ನು ಹೀಗೆ ಬರಮಾಡಿಕೊಂಡಿದ್ದಾರೆ.**

*ಬಂತು ದೀಪಾವಳಿ*
*ಮನೆಗಳಲ್ಲಿ*
*ಮನಗಳಲಿ*
*ಮೂಲೆ–ಮೂಲೆಯ ತಬ್ಬಿ ಮುತ್ತಿಡುವ*
*ಕತ್ತಲೆಗೆ*
*ತಂತು ನಡುಕದ ಮೈ ಚಳಿ,*
*ತಲೆ ಎತ್ತಿ ನಗುತಲಿಹ ಮಹಲಿನಲ್ಲಿ*
*ಅದನ್ನೆತ್ತೆ ತೇಕುತಿಹ ಗುಡಿಸಲಲಿ*
*ಎಲ್ಲಿ ನೋಡಿದರಲ್ಲಿ ದೀಪಗಳ ಹಾವಳಿ.*

**ಕವಿ ಗೋಪಾಲಕೃಷ್ಣ ಅಡಿಗರ ದೃಷ್ಟಿಯಲ್ಲಿ ದೀಪಾವಳಿ ;**

*ಬರಿಯ ಬಯಲಾಡಂಬರದ ದೀಪಗಳ*
*ಸಾಲ ಸುರುಸಿರುವರೇಕೆ ಕನ್ನಡಿಗರೆ?*
*ನೀವಿಂದು ಸಿಂಗರಿಸಿರೈ ಕರ್ನಾಟಕಾಭಿಮಾನ*
*ಜ್ಯೋತಿಯಿಂದೆ*
*ನಿಮ್ಮೆದೆಮನೆಯನು !*

**ತುಳಸಿ ಪೂಜೆ :** ತುಳಸಿ ಸಸ್ಯದ ಬಗ್ಗೆ ಪೌರಾಣಿಕ ಕಥೆಯೊಂದು ಹೀಗಿದೆ. ಜಲಂಧರ



ಎಂಬ ದುಷ್ಟ ಪ್ರವೃತ್ತಿಯ ಒಬ್ಬ ರಾಜನಿದ್ದ. ಈತನ ಕೆಟ್ಟ ನಡತೆಯಿಂದ ದೇವಲೋಕಕ್ಕೆ ಅಪಕೀರ್ತಿ ಬರತೊಡಗಿತು. ಆದರೆ ಈತನ ಪತ್ನಿ ವೃಂದೆಯು ಮಹಾಪತಿವೃತೆಯಾಗಿದ್ದಳು. ವಿಷ್ಣು ಮತ್ತು ಶಿವ ಒಂದು ಉಪಾಯವನ್ನು ಮಾಡಿದರು. ವಿಷ್ಣು ಜಲಂಧರನ ವೇಷ ಧರಿಸಿ ವೃಂದೆಯನ್ನು ಸೇರುತ್ತಾನೆ. ವೃಂದೆಯ ಪಾತಿವೃತ್ಯೆ ಹಾಳಾಗುತ್ತದೆ. ಜಲಂಧರ ಸಾವನ್ನಪ್ಪುತ್ತಾನೆ. ವೃಂದೆ ಪತಿಯ ಚಿತೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಜಲಂಧರನ ಸಾವು ವೃಂದೆಯ ಪಾತಿವೃತ್ಯ ಹರಣದ ವಿಚಾರ ಲಕ್ಷ್ಮಿಗೆ ತಿಳಿಯಿತು. ವಿಷ್ಣು ಲಕ್ಷ್ಮಿಯ ಸಿಟ್ಟನ್ನು ತಿಳಿದು ವೃಂದೆಯ ಹೆಸರು ಭೂ ಲೋಕದಲ್ಲಿ ಅಮರವಾಗಿ ಉಳಿಯಲೆಂದು ಅನುಗ್ರಹಿಸುತ್ತಾನೆ. ವೃಂದೆ ಚಿತೆಗೇರಿದ ಸ್ಥಳದಲ್ಲಿ 'ತುಳಸಿ' ಸಸ್ಯ ಹುಟ್ಟುವಂತೆ ಮಾಡುತ್ತಾನೆ. ವೃಂದೆ ಚಿತೆಗೇರಿದ ದಿನವು ಉತ್ಥಾನದ್ವಾದಶಿಯಾಗಿದ್ದು ಅಂದು ವಿಶೇಷ ತುಳಸೀ ಪೂಜೆ ಈಗಲೂ ನಡೆಯುಯುತ್ತದೆ.

ಇನ್ನೊಂದು ಕಥೆಯ ಪ್ರಕಾರ, ದೇವತೆಗಳೊಡನೆ ಜಲಂಧರ ಯುದ್ಧ ಮಾಡಿದ. ವಿಷ್ಣು ಜಲಂಧರನ ರೂಪದ ರುಂಡ–ಮುಂಡ ಸೃಷ್ಟಿಸಿ ಕೋತಿ ಮೂಲಕ ಅವನ್ನು ವೃಂದೆಗೆ



ತಲುಪಿಸಿದ. ಪತಿ ಸಾವನ್ನಪ್ಪಿದ ಎಂದು ವೃಂದೆ ಶೋಕತಪ್ತಳಾದಳು. ಸಾಧುವಿನ ವೇಷ ಧರಿಸಿ ಅಲ್ಲಿಗೆ ಬಂದ ವಿಷ್ಣು 'ಸಂಜೀವಿನಿ ವಿದ್ಯೆ' ತಿಳಿದಿದೆ ಎಂದು ಹೇಳಿ ನಕಲಿ ಜಲಂಧರನ ರುಂಡ–ಮುಂಡ ಒಂದುಗೂಡಿಸಿದ. ಮಾಯೆ ಮೂಲಕ ತಾನೇ ಆ ದೇಹ ಪ್ರವೇಶಿಸಿದ. ಸಂತೋಷದಿಂದ ಜಲಂಧರ ರೂಪದ ವಿಷ್ಣುವನ್ನು ವೃಂದೆ ಅಪ್ಪಿಕೊಂಡಾಗ ಪಾತಿವೃತ್ಯ ಭಂಗವಾಯಿತು. ಸತ್ಯ ಸಂಗತಿ ತಿಳಿದ ವೃಂದೆ 'ನಿನಗೂ ಪತ್ನಿ ವಿಯೋಗವಾಗಲಿ' ಎಂದು ವಿಷ್ಣುವನ್ನು ಶಪಿಸಿದಳು. ವೃಂದೆಯ ಚಿತೆಯನ್ನು ಪಾರ್ವತಿ ದಿಟ್ಟಿಸಿ ನೋಡಿದ್ದರಿಂದ ಅಲ್ಲಿ ತುಳಸಿ ಗಿಡ ಬೆಳೆಯಿತು. ತುಳಸಿ ಚಂದಕ್ಕೆ ಮನಸೋತ ವಿಷ್ಣು ವರಿಸಿದ. ಇದೇ ಕಾರ್ತಿಕ ಶುದ್ಧ ದ್ವಾದಶಿ ದಿನವೇ ತುಳಸಿ ವಿವಾಹ.

**ಪುರಂದರ ದಾಸರ ಕೀರ್ತನೆಯೊಂದು ತಿಳಿಸುತ್ತದೆ :**


*ಕಲ್ಯಾಣಂ ತುಳಸಿ ಕಲ್ಯಾಣಂ ಕಲ್ಯಾಣವೇ ನಮ್ಮ ಕೃಷ್ಣ ಶ್ರೀ ತುಳಸಿಗೆ।*
*ಬಲ್ಲಿದ ಶ್ರೀ ವಾಸುದೇವನಿಗೆ ॥ಪಲ್ಲ॥*
*ಅಂಗಳದೊಳಗೆಲ್ಲ ತುಳಸಿಯ ವನ ಮಾಡಿ ಶೃಂಗಾರವ ಮಾಡಿ ಶೀಘ್ರದಿಂದ।*
*ಕಂಗಳ ಪಾಪ ಪರಿಹರಿಸುವ ಮುದ್ದು ರಂಗ।*
*ಬಂದಲ್ಲಿ ತಾ ನೆಲೆಸಿದನು. ॥೧॥*
*ತಾ ನಿಂದು ಮಡಿಯನ್ನುಟ್ಟು ಸಂದೇಹವ ಬಿಟ್ಟು।*
*ತಂದ ಶ್ರೀ ಗಂಧಾಕ್ಷತೆಗಳಿಂದ ॥*
*ಸಿಂಧುಶಯನನ ವೃಂದಾವನದಿ ಪೂಜಿಸೆ।*
*ಕುಂದದ ಭಾಗ್ಯವ ಕೊಡುತಿಹಳು ॥೨॥*
*ಭಕ್ಷ್ಯ ಭೋಜ್ಯಂಗಳ ನೈವೇದ್ಯವನ್ನಿತ್ತು॥*
*ಲಕ್ಷಭತ್ತಿಯ ದೀಪವು ಹಚ್ಚಿ ಅಧೋಕ್ಷಜಲಸಹಿತ ವೃಂದಾವನ ಪೂಜಿಸೆ।*
*ಸಾಕ್ಷಾತ್ ಮೋಕ್ಷವ ಕೊಡುತಿಹಳು ॥೩॥*
*ಉತ್ಥಾನ ದ್ವಾದಶಿ ದಿವಸದಿಂದಲಿ ಕೃಷ್ಣ।*
*ಉತ್ತಮ ತುಳಸಿಗೆ ವಿವಾಹವ॥*
*ಚಿತ್ತ ನಿರ್ಮಲರಾಗಿ ಮಾಡಿದವರಿಗೆ ಉತ್ತಮ ಗತಿ ಈವ ಪುರಂದರವಿಠಲ ॥ಶ್ರೀ॥*

**ಇನ್ನೊಂದು ಪುರಂದರದಾಸರ ಕೀರ್ತನೆ ಹೀಗಿದೆ :**

*ಹೂವ ತರುವರ ಮನೆಗೆ ಹುಲ್ಲ ತರುವ*
*ಅವ್ವ ಲಕುಮೀರಮಣ*
*ಇವಗಿಲ್ಲ ಗರುವ ॥ಪಲ್ಲ॥*
*ಒಂದು ದಳ ಶ್ರೀ ತುಳಸಿ ಒಂದು ಬಿಂದೋದಕವು।*
*ಇಂದಿರಾರಮಣಗೆಅರ್ಪಿತಾವೆನುತಾ ॥*
*ಒಂದೇ ಮನದಲಿ ಸಿಂಧುಶಯನನು ತಾನು।*
*ಎಂದೆದೂ ವಾಸಿಪ ಮಂದಿರದೊಳಗೆ ॥೧॥*
*ಪರಿ ಪರಿಯ ಪುಷ್ಪಗಳು ಪರಮಾತ್ಮಗರ್ಪಿಸಿ।*
*ಪರಿಪೂರ್ಣವಾಗಿ ಪೂಜೆಯನು ಮಾಡಿ ॥*
*ಪರಮಾಸಕ್ತಿಯಲಿ ಸೇವೆಯನು ಮಾಡಿದರೆ।*
*ಸರಿಭಾಗವ ಕೊಡುವ ತನ್ನರಮನೆಯೊಳಗೆ ॥೨॥*
*ಪಾಂಡವರ ಮನೆಯಲಿ ಕುದುರೆಗಳ ತಾ ತೊಳೆದು। ಪುಂಡರಿಕಾಕ್ಷನೆ ಹುಲ್ಲು ತಂದು।*
*ಅಂಡಜವಾಹನ ಪುರಂದರ ವಿಠಲನು।*
*ತೊಂಡರಿಗೆ ತೊಂಡನಾಗಿ ಸಂಚರಿಸುತಿಹನು ॥೩॥*

ಆದ್ದರಿಂದ ಮುತ್ತೈದೆಯರು ಮುಂಜಾನೆ ಸ್ನಾನ ಮಾಡಿ ತುಳಸಿಕಟ್ಟೆಗೆ ಪೂಜೆ ಸಲ್ಲಿಸಿ ಮುಂದಿನ ಕೆಲಸ ಆರಂಭಿಸುತ್ತಾರೆ. ತುಳಸಿ ಕಟ್ಟೆ ಪ್ರತಿ ಮನೆಯ ಈಶಾನ್ಯ ಭಾಗದಲ್ಲಿ ಇರುತ್ತದೆ. ವೇದಕಾಲದಲ್ಲಿ, ಮಹಾಕಾವ್ಯಗಳ ಸಂದರ್ಭದಲ್ಲಿ ತುಳಸಿ ಬಳಕೆಯಲ್ಲಿತ್ತೆಂದು ತಿಳಿದು ಬರುತ್ತದೆ. ತಕ್ಕಡಿಯ ಒಂದು ತಟ್ಟೆಯಲ್ಲಿ ಶ್ರೀಕೃಷ್ಣ ಕುಳಿತನು. ಸತ್ಯಭಾಮೆ ಇನ್ನೊಂದು ತಟ್ಟೆಯಲ್ಲಿ ತನ್ನರಮನೆಯ ಸಂಪತ್ತೆಲ್ಲವನ್ನು ಇಟ್ಟಳು. ಆದರೆ ತಟ್ಟೆ ಮೇಲೇಳಲಿಲ್ಲ. ಈಗ ರುಕ್ಮಿಣಿಯ ಸರದಿ. ಅವಳು ಭಕ್ತಿಯಿಂದ ಒಂದು ದಳ ಶ್ರೀ ತುಳಸಿಯನ್ನು ತಟ್ಟೆಯಲ್ಲಿಟ್ಟಳು. ಆಗ ತಟ್ಟೆ ಮೇಲೇರಿ ಶ್ರೀಕೃಷ್ಣ ಕುಳಿತ ತಟ್ಟೆಗೆ ಸಮವಾಯಿತು. ಆದ್ದರಿಂದ ಒಂದು ದಳ ಶ್ರೀ ತುಳಸಿಗೆ ಅಷ್ಟೊಂದು ಮಹಾಶಕ್ತಿಯಿದೆ. ಶ್ವೇತ ತುಳಸಿ, ಕೃಷ್ಣ ತುಳಸಿ, ರಾಮ ತುಳಸಿ, ಕರ್ಪೂರ ತುಳಸಿ ಹೀಗೆ ತುಳಸಿಯಲ್ಲಿ ಹಲವು ಪ್ರಭೇದಗಳಿವೆ. ತುಳಸಿ ಮನೆಯಂಗಳದ ಮದ್ದು. ಬೇರಿನಿಂದ ಬೀಜದವರೆಗೂ ಔಷಧ. ತುಳಸಿ ಎಲೆ, ಶೀತ, ಕಫ, ಕೆಮ್ಮು, ಜ್ವರ, ಕಜ್ಜಿ, ಮೊಡವೆಗಳಿಗೆ ರಾಮಬಾಣ. ಸೂರ್ಯ–ಚಂದ್ರರ ಗ್ರಹಣಗಳ ಸಮಯದಲ್ಲಿ ತುಳಸಿ ಎಲೆಯನ್ನು ಆಹಾರಕ್ಕೆ ಹಾಕುತ್ತಾರೆ. ಶುಭ ಕಾರ್ಯಗಳಲ್ಲಿ ತುಳಸಿ ಎಲೆಯನ್ನು ಮುಂಜಾನೆ ಮಾತ್ರ ಕೀಳುತ್ತಾರೆ.

ಹಿಂದೂ ಧರ್ಮದಲ್ಲಿ ಮನುಷ್ಯನ ಪ್ರಾಣವಾಯು ಹಾರಿ ಹೋದಾಗ ತುಳಸೀ ದಳದೊಂದಿಗೆ ಬಾಯಿಗೆ ನೀರು ಬಿಡುವುದು, ಪಾರ್ಥಿವ ಶರೀರಕ್ಕೆ ತುಳಸಿಹಾರ ಹಾಕುವುದು ಇತ್ಯಾದಿ ಇಂದಿಗೂ ರೂಢಿಯಲ್ಲಿದೆ.




ವೃಂದಾವನ್ ನೆಸ್ಟ್
ಶುದ್ಧ ಸಸ್ಯಾಹಾರಿ
ಎನ್.ಎಚ್. 66, ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್:7899990950



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೆಲ್ ವೃಂದಾವನ, ಕದ್ರಿ, ಮಂಗಳೂರು
ವಿನೀತ್ ಮೆಡಿಕಲ್ಸ್, ಪಡುಬಿದ್ರಿ
ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ



## ನಿಧನ



### ಎಲ್ಲೂರು ರತ್ನಾಕರ ರಾವ್

ಎಲ್ಲೂರು ರತ್ನಾಕರ ರಾವ್ (68ವರ್ಷ) ಅವರು ತಾ.16.10.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಅವರು ಪ್ರಸಿದ್ಧ ಎಲ್ಲೂರು ಮನೆತನದ ದಿ| ವೆಂಕಟ್ರಮಣಯ್ಯ ಹಾಗೂ ಪದ್ಮಾವತಿ ದಂಪತಿಯರ ಕೊನೆಯ ಪುತ್ರರು. ಶ್ರೀಯುತರು ಪ್ರತಿಷ್ಠಿತ ತಾಂತ್ರಿಕ ವಿದ್ಯಾಲಯ ಕೆ.ಆರ್.ಇ.ಸಿ ಯಲ್ಲಿ ತಾಂತ್ರಿಕ ಪದವಿ ಪಡೆದು ಕರಾಡದಲ್ಲಿ ಡೆಲ್ ಸ್ಟಾರ್ ಕಂಪನಿಯಲ್ಲಿ ಸೇವೆಯಲ್ಲಿ ಇದ್ದರು. ಕೊರೆಗಾಂವ್‌ನಲ್ಲಿ ಓಂ ಜನರಲ್ ಮಳಿಗೆ ಪ್ರಾರಂಭಿಸಿದ್ದರು. ಶ್ರೀಯುತರು ಪತ್ನಿ ದೀಪಾ(ಗೀತ), ಮಗಳಂದಿರಾದ ಅಶ್ವಿನಿ, ಅವಂತಿ, ಅಳಿಯ ಗಣೇಶ್, ಅಶ್ವತ್ ಹಾಗೊ ಮೊಮ್ಮಗ ಶರ್ವಿನ್ ಅವರನ್ನು ಅಗಲಿದ್ದಾರೆ.

★★★★ ★★★★

### ಶ್ರೀಮತಿ ಸುಲೋಚನಾ ಯಜ್ಞನಾರಾಯಣ ರಾವ್

ಬಾರ್ಕೂರು ಬ್ರಾಹ್ಮಣ ಮಹಾಸಭಾದ ಸದಸ್ಯರಾದ ಶ್ರೀಮತಿ ಸುಲೋಚನಾ ಯಜ್ಞ ನಾರಾಯಣ ರಾವ್ (ನವ ಬಾರ್ಕೂರಿನ ನಿರ್ಮಾತೃ ದಿ| ಯಜ್ಞ ನಾರಾಯಣ ರಾಯರ ಧರ್ಮಪತ್ನಿ, ಹಾಗೂ ಬಾರ್ಕೂರು ಬ್ರಾಹ್ಮಣ ಮಹಸಭಾದ ಅಧ್ಯಕ್ಷರಾದ ಶ್ರೀಯುತ ಕೆ ಶಾಂತಾರಾಮ ರಾಯರ ಮಾತ್ರಶ್ರೀ) ಇವರು ತಾ.24.10.2021ರಂದು ನಿಧನರಾದರು.

★★★★ ★★★★

### ಅಜೆಕಾರು ಕೃಷ್ಣ ರಾವ್

ಅಜೆಕಾರು ಕೃಷ್ಣ ರಾವ್ (64 ವರ್ಷ) ಅವರು ತಾರೀಕು 01–11–2021 ರ ಸಂಜೆ 7.45ಕ್ಕೆ ಪುತ್ತೂರಿನಲ್ಲಿರುವ ತನ್ನ ಮಗಳ ಮನೆಯಲ್ಲಿ ದೈವಾಧೀನರಾದರು. ಮೃತರು ಮಡದಿ ಭಾರ್ಗವಿ, ಮಗ ಡಾ| ವಿಶಾಂತ್, ಮಗಳು ವಿಶ್ಮಾ ಅಲ್ಲದೆ ತಾಯಿ, ಮೂವರು ಸಹೋದರ, ಇಬ್ಬರು ಸಹೋದರಿ, ಅಪಾರ ಬಂಧುಬಳಗದವರನ್ನು ಅಗಲಿದ್ದಾರೆ.

★★★★ ★★★★

### ಗಣೇಶ್ ಎಲ್ಲಂಗಳ

ಕಾಸರಗೋಡು ತಾಲೂಕಿನ ಮಧೂರು ಗ್ರಾಮದ ಎಲ್ಲಂಗಳದ ಗಣೇಶ್ ಎಲ್ಲಂಗಳ ಅವರು ದಿನಾಂಕ 21–10–2021ರಂದು ನಿಧನರಾದರು. ಅವರಿಗೆ 58 ವರ್ಷ ಪ್ರಾಯ ವಾಗಿತ್ತು. ಖಾಸಗಿ ಬಸ್ ನಿರ್ವಾಹಕರಾಗಿದ್ದ ಅವರು ಪತ್ನಿ ಸುವರ್ಣ, ಪುತ್ರ ಶ್ರೇಯಸ್ ಹಾಗೂ ಅಪಾರಬಂಧುಮಿತ್ರರನ್ನು ಅಗಲಿದ್ದಾರೆ.

## ಶ್ರದ್ಧಾಂಜಲಿ ಸಭೆ



### ಪೆರ್ಡೂರು ನರಸಿಂಹ ಭಂಡಿ

ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀಯುತ ನರಸಿಂಹ ಭಂಡಿಯವರು 13.10.2021ರಂದು ನಿಧನರಾಗಿದ್ದು, ಆ ಪ್ರಯುಕ್ತ ಅವರ ಸ್ವಗ್ರಹದಲ್ಲಿ ಜರಗಿದ ಮಿತ್ರಭೋಜನದ ಸಂದರ್ಭ ಶ್ರದ್ಧಾಂಜಲಿ ಸಭೆ ಏರ್ಪಡಿಸಲಾಗಿತ್ತು. ಸಭೆಯಲ್ಲಿ ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವರಾವ್‌ರವರು ದಿವಂಗತರ ಗುಣಗಾನಗೈದು, ಸಂಘಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ನಂತರ ದಿವಂಗತರ ಭಾವಚಿತ್ರಕ್ಕೆ ಗೌರವ ಪೂರ್ವಕವಾಗಿ ಹಾಜರಿದ್ದ ಸದಸ್ಯರು ಪುಷ್ಪ ನಮನ ಸಲ್ಲಿಸಿದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶ್ಯಾನುಭೋಗ್, ಕಾರ್ಯದರ್ಶಿ ಶ್ರೀ ಪಾಲಚಂದ್ರ ಶರ್ಮಾ, ಜೊತೆ ಕಾರ್ಯದರ್ಶಿ ಶ್ರೀ ಪ್ರವೀಣ್ ಕುಮಾರ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್ ಹಾಗೂ ಇತರ ಸದಸ್ಯರು ಹಾಜರಿದ್ದರು.



ಕರಂದಾಡಿ ಶಾನುಭಾಗರ ಮನೆಯಲ್ಲಿ ದಿನಾಂಕ 10.10.2021 ರಂದು ಕುಟುಂಬಿಕರ ಕೂಡುವಿಕೆಯಿಂದ ವರ್ಷಾವಧಿ ನವರಾತ್ರಿ ಚಂಡಿಕಾಯಾಗ ನೆರವೇರಿತು.

## ಶ್ರೀಮತಿ ಶರಾವತಿ – ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ



ಸ್ಥಾನಿಕ ಸಮಾಜದ ಬಹುಮುಖ ಪ್ರತಿಭಾವಂತ ಎಲ್ಲೂರಿನ ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶರಾವತಿ ಯು.ಆರ್ ಅವರಿಗೆ "ಸಮಾಜ ಸೇವೆ" ಕ್ಷೇತ್ರದಲ್ಲಿ 2021 ರ ಸಾಲಿನ ಉಡುಪಿ ಜಿಲ್ಲೆಯ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾದ ಸಂದರ್ಭದಲ್ಲಿ ಹೃತ್ಪೂರ್ವಕ ಅಭಿನಂದನೆಗಳು. ಶ್ರೀಮತಿ ಶರಾವತಿ ಯು.ಆರ್ ಅವರು ದಿವಂಗತ ಶ್ರೀ ರವಿರಾಜ್‌ರವರ ಪತ್ನಿ.

## ಶ್ರೀ ಎಚ್.ರಘುವೀರ ರಾವ್ ಪೆರ್ಡೂರು ಇವರಿಗೆ ಅಭಿನಂದನೆ




ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ನಾಡಹಬ್ಬ ಕಾರ್ಯಕ್ರಮದಲ್ಲಿ ದಿ| ದಾಮೋದರ ಭಾಗೀರಥಿ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ, ಶ್ರೀ ಸಭಾದ ನಿರ್ದೇಶಕರೂ, ಹವ್ಯಾಸಿ ಛಾಯಾಗ್ರಾಹಕರೂ, ರೇಖಾಚಿತ್ರ ಪರಿಣಿತರೂ, ಸಮಾಜ ಸೇವೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡವರೂ, ಸಾಂಸ್ಕೃತಿಕ–ಧಾರ್ಮಿಕ ಕಾರ್ಯಕ್ರಮಗಳ ಪೋಷಕರೂ ಆದ ಶ್ರೀ ರಘುವೀರ ಪೆರ್ಡೂರು ಮತ್ತು ಶ್ರೀಮತಿ ಲತಾ ದಂಪತಿಗಳನ್ನು ವಿಶೇಷ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಪ್ರತಿಷ್ಠಾನದ ಶ್ರೀ ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರಾ ಶಾಸ್ತ್ರಿ ಕಾರ್ಯಕ್ರಮ ನಡೆಸಿಕೊಟ್ಟರು.

## ಕಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದಿಂದ ಪ್ರತಿಭಾ ಪುರಸ್ಕಾರ



ದಿನಾಂಕ 17.10.2021 ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇಲ್ಲಿ ನಡೆದ ನಾಡಹಬ್ಬದಂದು 2020–21 ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ ಹಾಗೂ ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಕಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಕೆ. ಸೌಭದ್ರಾ ಸದಾಶಿವ ಶಾಸ್ತ್ರಿ ದಂಪತಿಗಳು ಅಭಿನಂದಿಸಿದರು.




ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಕಾರ್ಕಳದಲ್ಲಿ ಪ್ರಥಮ
ತಾಜಾ ಹಾಗೂ ಉತ್ತಮ ಗುಣ ಮಟ್ಟದ ಎಲ್ಲಾ ರೀತಿಯ ಹಿಟ್ಟು ಒಂದೇ ಜಾಗದಲ್ಲಿ ಲಭ್ಯ. ನಮ್ಮಲ್ಲಿ ಗೋಧಿ, ಜೋಳ, ಅಕ್ಕಿ, ರಾಗಿ ಹಿಟ್ಟು ಹಾಗೂ ಅಕ್ಕಿ ರವ ದೊರೆಯುತ್ತದೆ.
ಪ್ರಕೃತಿ ಸ್ಟೋರ್ಸ್
ಪ್ರಸಾದ್ ಭವನ (ವಿ. ಕೆ. ಡೆಕೋರೇಟರ್ಸ್ ಬಳಿ)
ಹೊಟೇಲ್ ಮಹಾಲಸಾ ಎದುರು, ತೆಳ್ಳಾರು ರಸ್ತೆ, ಕಾರ್ಕಳ
For The First Time We Are Introducing Fresh And Good Quality Of Rice, Ragi, Jowar & Wheat Flour Along With Rice Rava In Single Venue
Contact: Prakrithi Stores, Prasad Bhavana (Near: V. K. Decoratores), Opp: Hotel Mahalasa, Tellar Road, Karkala. Mob: 8296375933

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
the right Place for the right customers
QUALITY FIRST AND ALWAYS

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಸಂಭ್ರಮ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.6.11.2021 ಶನಿವಾರ ದೀಪಾವಳಿ ಆಚರಣೆಯು ವಿಜ್ರಂಭಣೆಯಿಂದ ನಡೆಯಿತು. ದೀಪ ಪ್ರಜ್ವಲನೆ ಬಳಿಕ ಪ್ರಾರ್ಥನೆ ಹಾಗೂ ಧನಲಕ್ಷ್ಮಿ ಸ್ವಾಗತ ಗೀತೆಯನ್ನು ಶ್ರೀಮತಿ ಮಂಜುಳ ಮುರಳೀಧರ್, ಶ್ರೀಮತಿ ಉಷಾ ನಟರಾಜ್, ಶ್ರೀಮತಿ ಜಯಂತಿ ವಿನೋದ್ ಹಾಡಿದರು. ಧಾರ್ಮಿಕ ಉಪನ್ಯಾಸವನ್ನು ಶ್ರೀ ಪಿ. ಪ್ರಭಾಕರ್ ರಾವ್, ಉಪಾಧ್ಯಕ್ಷರು ಎಂ.ಸಿ.ಎಫ್. ಇವರು ನೀಡಿದರು. ಬಳಿಕ ವಿನೋದಾತ್ಮಕ ಆಟಗಳು, ಸಾಂಪ್ರದಾಯಿಕ ಉಡುಗೆ ಸ್ಪರ್ಧೆಗಳು ನಡೆದವು. ತೀರ್ಪುಗಾರರಾಗಿ ಶ್ರೀ ಜನಕರಾಜ್, ಶ್ರೀಮತಿ ಶಾರದಾ ಉದಯ ಭಾಸ್ಕರ ಸಹಕರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮವು ಶ್ರೀಮತಿ ಅನುರಾಧ ರಾವ್ ನಿರ್ದೇಶನದಲ್ಲಿ 26 ಸದಸ್ಯರ ಆಕರ್ಷಕ ನೃತ್ಯ ಪ್ರದರ್ಶನದೊಂದಿಗೆ ನಡೆಯಿತು. ದೀಪದ ಮುಂಭಾಗ ಆಕರ್ಷಕ ರಂಗೋಲಿ ಬಿಡಿಸಿದ ಶ್ರೀ ನಾಗರಾಜ್ ಶರ್ಮ ಹಾಗೂ ಶ್ರೀಮತಿ ಅನುರಾಧಾ ರಾವ್‌ರವರಿಗೆ ಗೌರವ ಸಲ್ಲಿಸಲಾಯಿತು. ಸಾಮೂಹಿಕ ದಾಂಡಿಯಾ ನೃತ್ಯದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಉಪಾಧ್ಯಕ್ಷರಾದ ಡಾ.ಎ.ಪಿ.ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್, ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್, ಡಾ. ಜಯಲಕ್ಷ್ಮೀ, ಯುವವೇದಿಕೆ ಪದಾಧಿಕಾರಿಗಳಾದ ಶ್ರೀ ಮನೀಷ್. ಯು, ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ ಸಹಕರಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.

# ನಿರಂಜನ್ ಪಾಂಡೇಶ್ವರ್‌ಗೆ ಪ್ರತಿಷ್ಠಿತ ಮನೋಹರ್ ಪಾರೀಕರ್ ವಿದ್ಯಾರ್ಥಿವೇತನ



ಗೋವಾ ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪರೀಕ್ಷೆಗಳನ್ನು ಉತ್ತಮ ಅಂಕಗಳಿಂದ ತೇರ್ಗಡೆಯಾಗಿ, ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ, ಗೋವಾ ರಾಜ್ಯದ ಮುಖ್ಯ ಮಂತ್ರಿ ಹಾಗೊ ಕೇಂದ್ರ ಸರಕಾರದ ರಕ್ಷಣಾ ಮಂತ್ರಿಯಾಗಿದ್ದ ಮನೋಹರ್ ಪಾರೀಕರ್ ಹೆಸರಿನಲ್ಲಿ ಪ್ರತಿವರ್ಷ ನೀಡುವ "ಸ್ಕೋಲರ್ ಆಫ್ ಮನೋಹರ್ ಪಾರೀಕರ್ ಗೋವಾ" ಹೆಸರಿನ 2019–20ರ ಸಾಲಿನ ವಿದ್ಯಾರ್ಥಿ ವೇತನಕ್ಕೆ ನಿರಂಜನ್ ಪಾಂಡೇಶ್ವರ್ ಆಯ್ಕೆಯಾಗಿದ್ದಾರೆ.

ಪ್ರಾಥಮಿಕ ಶಾಲೆಯಿಂದ ಪದವಿವರೆಗಿನ ಅಂಕಪಟ್ಟಿ ಹಾಗೂ ಸಹಪಠ್ಯ ಚಟುವಟಿಕೆ, ಕ್ರೀಡೆ ಮತ್ತು ಸಂಸ್ಕೃತಿಗಳ ಪರಿಗಣನೆಯೊಂದಿಗೆ ಪ್ರತಿ ವರ್ಷ 60 ವಿದ್ಯಾರ್ಥಿಗಳು ಆಯ್ಕೆಯಾಗುತ್ತಾರೆ. ಅದರಲ್ಲಿ ಸ್ನಾತಕೋತ್ತರ ಪದವಿಯ ಪ್ರತಿಭೆಯನ್ನಾಧರಿಸಿ 30 ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕೆ ಆಯ್ಕೆಯಾಗುತ್ತಾರೆ. ಈ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯನ್ನು ದೇಶದ ಮಾತ್ರವಲ್ಲದೆ ವಿಶ್ವದ ಯಾವುದೇ ವಿಶ್ವವಿದ್ಯಾನಿಲಯದಲ್ಲಿಯೂ ಮಾಡಬಹುದು. ಅಂತೆಯೇ ದೇಶದ ಪ್ರತಿಷ್ಠಿತ ಕಾಲೇಜುಗಳಲ್ಲದೆ, ಜರ್ಮನ್, ಇಂಗ್ಲೆಂಡ್, ಅಮೇರಿಕಾ, ಆಸ್ಟ್ರೇಲಿಯಾ ಮೊದಲಾದ ದೇಶಗಳ ಬೇರೆ ಬೇರೆ ವಿಶ್ವವಿದ್ಯಾನಿಲಯದಲ್ಲಿ ಕಲಿಯುತ್ತಿರುವ 30 ವಿದ್ಯಾರ್ಥಿಗಳೊಂದಿಗೆ ನಿರಂಜನ್ ಪಾಂಡೇಶ್ವರ್ ಆಯ್ಕೆಯಾಗಿದ್ದಾರೆ. ದೇಶದೊಳಗೆ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ 8 ಲಕ್ಷ ರೂ. ಹಾಗು ವಿದೇಶದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗೆ 25000 ಅಮೇರಿಕನ್ ಡಾಲರ್ (ಸುಮರು 18 ಲಕ್ಷ ರೂ.) ವಿದ್ಯಾರ್ಥಿವೇತನವಾಗಿ ವಿತರಿಸಲಾಗುತದೆ.

ನಿರಂಜನ್ ಪಾಂಡೇಶ್ವರ್ ಗೋವಾ ರಾಜ್ಯದ ವಾಸ್ಕೋದಲ್ಲಿ ದ್ವಿತೀಯ ಪಿಯುಸಿವರೆಗೆ ಕಲಿತು, ಪೋಂಡಾದ ಗೋವಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈಯನ್ಸ್‌ನಲ್ಲಿ ಇಂಜಿನಿಯರಿಂಗ್ ಪದವಿ ಪಡೆದರು. ಬಳಿಕ ಅಮೇರಿಕದ ನೋರ್ತ್ ಕರೋಲಿನಾ ಯುನಿವರ್ಸಿಟಿಯಲ್ಲಿ ಸ್ನಾತಕೋತ್ತರ ಪದವಿ (ಎಂ ಟೆಕ್) ಓದಲು ಆಯ್ಕೆಯಾದರು. ಇದಕ್ಕಾಗಿ ಕಳೆದ ಎರಡುವರೆ ವರ್ಷದಿಂದ ಅಮೇರಿಕಾದಲ್ಲಿ ವಾಸ್ತವ್ಯದಲ್ಲಿದ್ದು ಇದೀಗ ಸ್ನಾತಕೋತ್ತರ ಪದವಿ ಮುಗಿಸಿ, ಅಮೇರಿಕದ "ಡಿಎನ್‌ಎ ನೆಕ್ಸಸ್" ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದಾರೆ.

ನಿರಂಜನ್ ಪಾಂಡೇಶ್ವರ್ ಮೂಲತ: ಉಡುಪಿ ಜಿಲ್ಲೆಯ ಸಾಸ್ತಾನ– ಪಾಂಡೇಶ್ವರದವರಾಗಿದ್ದು, ಗೋವಾದ ವಾಸ್ಕೋ ಪ್ರಥಮ ದರ್ಜೆ ಕಾಲೇಜಿನಲ್ಲಿ ಉದ್ಯೋಗಿಯಾಗಿದ್ದು ನಿವೃತ್ತರಾದ ಶ್ರೀ ರಮೇಶ್ ಪಾಂಡೇಶ್ವರ್ ಹಾಗೂ ಶ್ರೀಮತಿ ಹೇಮಲತಾ ಪಾಂಡೇಶ್ವರ್ ದಂಪತಿಗಳ ಸುಪುತ್ರ. ಶ್ರೀಯುತ ನಿರಂಜನ್ ಪಾಂಡೇಶ್ವರ್ ಅವರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

With Best Complimemts From
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

# ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯರವರ ವ್ಯಕ್ತಿ ಪರಿಚಯ



–ಡಾ.ಬಿ ಜನಾರ್ದನ ಭಟ್

ಬಾಲಕ ಲಕ್ಷ್ಮೀನಾರಾಯಣ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಧರ್ಮಗುರುಗಳಾದ ಕಾಶೀ ಮಠಾಧೀಶ ಶ್ರೀ ಭುವನೇಂದ್ರ ತೀರ್ಥ ಸ್ವಾಮಿಜಿಯವರ ಆಶ್ರಯವನ್ನು ಸಂಪಾದಿಸಿದ. ಗುರುಗಳು ಅವನಿಗೆ ಸಂಸ್ಕೃತ ಭಾಷೆ, ಕಾವ್ಯಾದಿಗಳ ಅಭ್ಯಾಸವನ್ನು ಮಾಡಿಸಿದರು. ನಂತರ, ಬಹುಶಃ ಕಾಶಿ ಮಠಾಧೀಶರ ಆಜ್ಞೆಯಂತೆ, ಹರಿಕೀರ್ತನೆಗಾರ ಸಿದ್ದಾಪುರ ವೆಂಕಟರಮಣ ಪ್ರಭುಗಳಿಂದ ಹರಿಕಥೆಯ ಉಪದೇಶವನ್ನೂ ಲಕ್ಷ್ಮೀನಾರ್ಣಪ್ಪಯ್ಯ ಪಡೆದರು. ಕಾಶೀ ಮಠಾಧೀಶರ ಅನುಗ್ರಹವನ್ನು ಹರಿದಾಸರು ಭಕ್ತಿಯಿಂದ ಹೀಗೆ ಸ್ಮರಿಸಿದ್ದಾರೆ:

*ಕಂಡು ಕೃತಾರ್ಥನಾದೆ ಭುವನೇಂದ್ರರಂಘ್ರಿಯ ।*
*ಕಂಡು ಕೃತಾರ್ಥನಾದೆ ॥ ಪಲ್ಲ ॥*
*ಕಂಡು ಕೃತಾರ್ಥನಾದೆ ಭೂ ।*
*ಮಂಡಲದಿ ಪೆಸರ್ಗೊಂಡು ಮೆರೆದಿಹ ।*
*ಪುಂಡರೀಕ ದಳಾಕ್ಷ ಸತತಾ ।*
*ಖಂಡಸುಖ ಮಾರ್ತಾಂಡ ತೇಜರ ॥ ಕಂಡು ॥*
*ವಾರಿರುಹಭವಾಂಡದ ಭೂಮಧ್ಯ ವಿ ।*
*ಸ್ತಾರ ಜಂಬೂದ್ವೀಪದ ನವಖಂಡದೊಳ್ ।*
*ಸಾರ ಭರತ ಖಂಡದ ಹಿಮಗಿರಿಯ ಪಾರ್ಶ್ವದ ।*
*ತೋರ್ಪ ವಿಂಧ್ಯಾಚಲದ ಮಧ್ಯ ಭಾ*
*ಗೀರಥಿಯ ಪಶ್ಚಿಮ ಭೂಭಾಗದ ।*
*ತೀರ ಕಾಶೀಮಠ ಸಂಸ್ಥಾನ ವಿ ।*
*ಚಾರ ಶಾಸ್ತ್ರ ವಿಶಾರದರ ಪದ ॥ ಕಂಡು ॥*

ಗುರುಗಳನುಗ್ರಹದಿಂದ ಆಶುಕವಿತ್ವವನ್ನು ಸಂಪಾದಿಸಿಕೊಂಡ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ, ಹದಿನೆಂಟು ವರ್ಷಗಳ ನಂತರವೇ – 1882 ರಲ್ಲಿ – ಮತ್ತೆ ಊರಿನಲ್ಲಿ, ಕಾರ್ಕಳ ವೆಂಕಟರಮಣ ದೇವಸ್ಥಾನದ ಪರಿಸರದಲ್ಲಿ ಹರಿಕೀರ್ತನೆ ಮಾಡುತ್ತಾ, ಭಿಕ್ಷುಕನಂತೆ, ಅವಧೂತನಂತೆ ಕಾಣಿಸಿಕೊಂಡರು. ಸ್ಫೂರ್ತಿ ಬಂದಾಗ ಶ್ರೀನಿವಾಸ, ಲಕ್ಷ್ಮೀನಾರಾಯಣ ಮೊದಲಾದ ದೇವರ ಪರವಾಗಿ ಕೀರ್ತನೆಗಳನ್ನು ಕಟ್ಟಿ ಹಾಡುತ್ತಿದ್ದ ಹರಿದಾಸರು, ಅವಧೂತನಂತೆ ಕಾಣುತ್ತಿದ್ದರು. ಒಮ್ಮೊಮ್ಮೆ ಕುಳಿತಲ್ಲೇ ಭಾವಸಮಾಧಿಗೆ ಹೋಗುತ್ತಿದ್ದರು; ತಿನ್ನಬೇಕೆನಿಸಿದಾಗ ಹಾಕಿದಷ್ಟನ್ನೂ ತಿಂದು ಬಿಡುತ್ತಿದ್ದರು; ಕೆಲವೊಮ್ಮೆ ದಿನಗಟ್ಟಲೆ ಉಪವಾಸವಿರುತ್ತಿದ್ದರು. ಈತನನ್ನು ಅವಧೂತನೆಂದು ಅಥವಾ ಹುಚ್ಚನೆಂದು ಕಾರ್ಕಳದ ಜನತೆ ತಿಳಿದುಕೊಂಡಿತು. ಇವರು ಹಾಡುವ ಹಾಡುಗಳು ಇವರದೇ ಸ್ವಂತ ರಚನೆಯೆಂದು ಅಲ್ಲಿನವರಿಗೆ ಮೊದಲು ಗೊತ್ತಿರಲಿಲ್ಲ. ಎರಡು ತಿಂಗಳು ಕಳೆದ ನಂತರ, ವೆಂಕಟರಮಣ ದೇವಸ್ಥಾನದ ಕಾಲಭೈರವ'ನ ಸೂಚನೆಯಂತೆ (ಹೀಗೆಂದು ಬೆಳ್ಳೆ ಭುಜಂಗರಾಯರು ಮತ್ತು ದಿವಾಕರ ಭಟ್ ದಾಖಲಿಸಿದ್ದಾರೆ) ಅಲ್ಲಿನ ಮೊಕ್ತೇಸರರು ಹರಿದಾಸರನ್ನು ದೇವರ ಸನ್ನಿಧಿಗೆ ಕರೆದೊಯ್ದರು. ಅಲ್ಲಿ ಅವರು ಆಗಿಂದಾಗಲೇ ಒಂದು ಹಾಡು ಕಟ್ಟಿ ಹಾಡಿದರು. ನೋಡಿದೆ ಮನದಣಿಯೆ । ಶ್ರೀನಿವಾಸನ ಎನ್ನುವ ಕೀರ್ತನೆ ಅದು. (ಹರಿದಾಸರ ಎಲ್ಲ ಕೀರ್ತನೆಗಳೂ ಹೀಗೆ ಸಾಂದರ್ಭಿಕವಾಗಿ ಸೃಷ್ಟಿಯಾದವುಗಳು).

ಅಂದಿನಿಂದ ಹರಿದಾಸರಿಗೆ ಕಾರ್ಕಳದ ವೆಂಕಟರಮಣ ದೇವಸ್ಥಾನದ ಮೊಕ್ತೇಸರರ ಮತ್ತು ಗೌಡಸಾರಸ್ವತ ಬ್ರಾಹ್ಮಣರ ನೆರವು ದೊರೆಕಿತು. ಕಾರ್ಕಳ ವೆಂಕಟರಮಣನ ಸನ್ನಿಧಿಯಲ್ಲಿ ಪ್ರಾರಂಭವಾದ ಇವರ ಹರಿಕಥಾ ಸತ್ಸಂಗ ಕಾರ್ಕಳದ ಜನತೆಯ ಮನವನ್ನು ಸೂರೆಗೊಂಡಿತಲ್ಲದೆ ಅವರ ಕೀರ್ತಿ ಕಾರ್ಕಳದ ಗೌಡಸಾರಸ್ವತ ಬ್ರಾಹ್ಮಣ ಸಮುದಾಯದವರ ಮೂಲಕ ಉತ್ತರಕನ್ನಡ ಹಾಗೂ ದಕ್ಷಿಣಕನ್ನಡ ಜಿಲ್ಲೆಯ ಎಲ್ಲೆಡೆ ಪ್ರಚಾರವಾಯಿತು. ಮುಖ್ಯವಾಗಿ ಗೌಡಸಾರಸ್ವತ ಸಮಾಜದವರ ಕೇಂದ್ರಸ್ಥಾನಗಳಾದ ಕಾರ್ಕಳ, ಬಂಟ್ವಾಳ, ಮೂಲ್ಕಿ, ಕುಮಟೆ, ಭಟ್ಕಳ, ಮಂಗಳೂರು, ಹೀಗೆ ಎಲ್ಲಾ ಕಡೆ ಅವರನ್ನು ಆಹ್ವಾನಿಸಿ ಅವರಿಂದ ಹರಿಕಥಾ ಸಪ್ತಾಹಗಳನ್ನೇ ನಡೆಯಿಸಿದರು. ಸಂಸಾರದಲ್ಲಿ ನೊಂದು ಬೆಂದ ಜೀವಗಳಿಗೆ ಇವರ ಹರಿಕಥೆ ಸಂಜೀವಿನಿ ಪ್ರಾಯವಾಯಿತು. ಅವರು ಕಾರ್ಕಳದಲ್ಲಿಯೇ ಹಲವು ವರ್ಷಗಳ ಕಾಲ ಇದ್ದು, ಹರಿಕಥೆಗಳನ್ನು ಮಾಡುತ್ತಾ ಕಾರ್ಕಳ, ಮುಲ್ಕಿ, ಮಂಗಳೂರು ಮತ್ತು ಉಡುಪಿ ತಾಲೂಕುಗಳ ಗ್ರಾಮಗಳಲ್ಲಿ ತಮ್ಮ ಸ್ವ ಇಚ್ಛೆಯಿಂದ ಭಕ್ತಿ–ಸಂಸ್ಕೃತಿಯ ಪ್ರಸಾರಕ್ಕಾಗಿ ಸಂಚರಿಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ, ದೂರದ ಮುಂಬಯಿಯಲ್ಲಿ ಸಹ ಅವರ ಹರಿಕಥಾ ಕಾಲಕ್ಷೇಪಗಳು ನಡೆಯುತ್ತಿದ್ದವು. ಆಹ್ವಾನದ ಮೇರೆಗೆ ಹರಿದಾಸರು ಅಲ್ಲಿಗೆಲ್ಲ ಹೋಗಿ ಬರುತ್ತಿದ್ದರು.

(ಮುಂದುವರಿಯುವುದು...)

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.23-11-2021 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.05-12-2021 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.24-11-2021 ಮತ್ತು ತಾ.08-12-2021 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವೃಶ್ಚಿಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16–11–2021 | ವೃಶ್ಚಿಕ ಸಂಕ್ರಮಣ, ಉತ್ಥಾನ ದ್ವಾದಶಿ, ತುಳಸಿ ಪೂಜೆ | 30–11–2021 | ಸರ್ವೈಕಾದಶಿ |
| 19–11–2021 | ಹುಣ್ಣಿಮೆ ಉಡುಪಿ ಲಕ್ಷ ದೀಪೋತ್ಸವ, | 04–12–2021 | ಅಮಾವಾಸ್ಯೆ |
| 20–11–2021 | ಶರದೃತು ಕಾರ್ತಿಕ ಮಾಸದ ಕೃಷ್ಣ ಪಕ್ಷಾರಂಭ | 05–12–2021 | ಹೇಮಂತಋತು ಮಾರ್ಗಶಿರ ಮಾಸದ ಶುಕ್ಲ ಪಕ್ಷಾರಂಭ |
| 23–11–2021 | ಸಂಕಷ್ಟಹರ ಚತುರ್ಥಿ (ಚಂದ್ರೋದಯ ರಾತ್ರಿ, 9.13 ಕ್ಕೆ) | 06–12–2021 | ಉಡುಪಿ ಚಂದ್ರ ಮೌಳೀಶ್ವರ ರಥೋತ್ಸವ |
| | | 09–12–2021 | ಸುಬ್ರಹ್ಮಣ್ಯ ಷಷ್ಠೀ, ಚಂಪಾ ಷಷ್ಠೀ |
| | | 14–12–2021 | ಸರ್ವೈಕಾದಶಿ, ಗೀತಾ ಜಯಂತಿ |
| | | 15–12–2021 | ಧನು ಸಂಕ್ರಮಣ |

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

# ಶ್ರೀ ಶಾರದಾ ಮಂಟಪದಲ್ಲಿ ದೀಪಾವಳಿ ಸಂಭ್ರಮ

ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿಯಲ್ಲಿ ಸಮಾಜಬಾಂಧವರಿಗಾಗಿ ದೀಪಾವಳಿ ಸಂಭ್ರಮವನ್ನು ದಿನಾಂಕ 06.11.2021ರಂದು ಶ್ರೀ ಶಾರದಾ ಮಂಟಪದಲ್ಲಿ ಆಚರಿಸಲಾಯಿತು. ಶ್ರೀದೇವಿಯ ಸನ್ನಿಧಿಯಲ್ಲಿ 1000 ಹಣತೆ ದೀಪವನ್ನು ಪ್ರಜ್ವಲಿಸಿ ಪೂಜೆ ಮಾಡಲಾಯಿತು. ನಂತರ ನಮ್ಮ ಸಮಾಜದ ಮಹಿಳೆಯರಿಂದ ಸ್ವಾಗತ ನೃತ್ಯ ಮತ್ತು ಮಕ್ಕಳಿಂದ ಇನ್ನಿತರ ನೃತ್ಯ ನಡೆಯಿತು. ಹಾಗೂ ಸಮಾಜ ಬಾಂಧವರು ಹಾಡನ್ನು ಹಾಡಿ ಸಂಭ್ರಮಿಸಿದರು. ಎಲ್ಲಾ ವಯೋಮಾನದವರು ಸಂಗೀತಕ್ಕೆ ಹೆಜ್ಜೆ ಹಾಕಿ ಕೋಲಾಟ, ಹುಲಿ ನೃತ್ಯ, ಇನ್ನಿತರ ನೃತ್ಯದಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಕೊನೆಯಲ್ಲಿ ಚಿಕ್ಕ ಸಮಾರಂಭವನ್ನು ಏರ್ಪಡಿಸಿ ನಾಲ್ಕು ವಿಭಾಗಗಳಲ್ಲಿ ಬಹುಮಾನವನ್ನು ವಿತರಿಸಲಾಯಿತು. ಸಮಾರಂಭದಲ್ಲಿ ಮಹಿಳಾ ವೇದಿಕೆ ಅಧ್ಯಕ್ಷರಾದ ಪೂರ್ಣಿಮಾ ಪಿ.ರಾವ್, ಗಣೇಶ ಹೆಬ್ಬಾರ್, ಸಿ.ಎ. ಹಾಗೂ ಸಂಘದ ಅಧ್ಯಕ್ಷರಾದ ಕೆ.ಮಂಜುನಾಥ ಹೆಬ್ಬಾರ್ ಉಪಸ್ಥಿತರಿದ್ದರು. ಪ್ರಭಾರ ಕಾರ್ಯದರ್ಶಿ ಪ್ರಭಾಕರ ಭಂಡಿ ಸ್ವಾಗತಿಸಿ, ವಿಶ್ವನಾಥ್ ಶಾನುಭೋಗ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕಾರ್ಯಕ್ರಮ ನಿರ್ಣಾಯಕರಾಗಿ ಬ್ರಹ್ಮಾವರ ಕೃಷ್ಣಮೂರ್ತಿ ರಾವ್, ಆಶಾ ಅರವಿಂದ ರಾವ್ ಮತ್ತು ಮಹೇಶ್ ರಾವ್ ಸಹಕರಿಸಿದರು. ಕಾರ್ಯಕ್ರಮದ ಪ್ರಾಯೋಜಕತ್ವವನ್ನು ಅಜಿತ್ ರಾವ್, ವಿನೋದ್ ಕುಮಾರ್, ಪ್ರಭಾಕರ ಭಂಡಿ, ಪ್ರಕಾಶ್ ಹೆಬ್ಬಾರ್, ಗಣೇಶ್ ಹೆಬ್ಬಾರ್ ಮತ್ತು ಮಂಜುನಾಥ ಹೆಬ್ಬಾರ್ ನೀಡಿ ಸಹಕರಿಸಿದರು. ಪೂರ್ಣಿಮಾ ಪಿ.ರಾವ್ ಬಹುಮಾನದ ಪ್ರಾಯೋಜಕತ್ವವನ್ನು ವಹಿಸಿದ್ದರು. ಕಾರ್ಯದರ್ಶಿ ಅರವಿಂದ ಕುಮಾರ್ ಗೌರವ ಸಲಹೆಗಾರರಾದ ಸಿ.ಎಸ್.ರಾವ್ ಹಾಗೂ ಇನ್ನಿತರ ನಿರ್ದೇಶಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಮಾಜ ಬಾಂಧವರಿಗೆ, ಪ್ರಾಯೋಜಕತ್ವವನ್ನು ವಹಿಸಿದ ಎಲ್ಲರಿಗೂ ಮತ್ತು ಮೆನೇಜರ್ ಅಜಿತ್ ರಾವ್, ಸಹಾಯಕ ಮೆನೇಜರ್ ನಾಗಭೂಷಣ ರಾವ್ ಇವರಿಗೂ ಸಂಘದ ಪರವಾಗಿ ಧನ್ಯವಾದಗಳು.



ಶ್ರೀ ಶಾರದಾ ದೇವಸ್ಥಾನದ ಮುಂಭಾಗ ಒಂದು ಸಾವಿರ ಹಣತೆಯ ದೀಪ ಬೆಳಗುವಿಕೆ.....



ಸಮಾಜಬಾಂಧವರಿಂದ ದಾಂಡಿಯಾ ನೃತ್ಯ ಪ್ರದರ್ಶನ...



ಸ್ಪರ್ಧೆಗಳ ತೀರ್ಪುಗಾರರಿಗೆ ಗೌರವಾರ್ಪಣೆ.....



ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ವಿಜಯದಶಮಿಯಂದು
ಶ್ರೀಶಾರದಾ ಮಂಟಪದಲ್ಲಿ "ದಕ್ಷಯಜ್ಞ ಮತ್ತು ಗಿರಿಜಾ ಕಲ್ಯಾಣ"


–: ಶುಭಾಶಯಗಳು :–

**"ಶ್ರೀ ಶಾರದಾಂಬೆಗೆ ವಂದಿಸುತ್ತಾ "ಶ್ರೀ ಶಾರದಾ" ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ ದಾರಿದೀಪವಾಗಲಿ" ಎಂದು ಹಾರೈಸುವ**

**ಜಿ.ಕೆ.ಕೋಲ್ಪೆ, ಉಡುಪಿ**

ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು,
ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ



*With Best Compliments from :*



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.




**With Best Compliments From :**

**BUILDING DREAMS, ENHANCING LIVES.**



NAKSHATRA
GANDHINAGAR



SOLITAIRE
HATHILL,



HABITAT ONE 54
An Urban Lifestyle
DEREBAIL



ANANTESSH
CAR STREET,

Land Trades®
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

## ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬ್ರಹ್ಮಾವರ ತಾಲೂಕು : ಪ್ರಥಮ ವಾರ್ಷಿಕ ಮಹಾಸಭೆ



ತಾ.24.10.2021ರ ಭಾನುವಾರದಂದು ಮಂದಾರ್ತಿಯ ಕಲ್ಲು ದೇವಸ್ಥಾನದ ಶ್ರೀ ಶಂಭುಶಂಕರ ರಾವ್ ಇವರ ಲಕ್ಷ್ಮೀಸದನ ಮನೆಯಲ್ಲಿ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬ್ರಹ್ಮಾವರ ತಾಲೂಕು ಇದರ ಪ್ರಥಮ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಳ್ಳಲಾಯಿತು.

ಶೃಂಗೇರಿ ಶ್ರೀ ಶಾರದಾ ಪೀಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ಶ್ರೀ ವಾಗೀಶ ಶಾಸ್ತ್ರಿ ಇವರ ಮಾರ್ಗದರ್ಶನದಲ್ಲಿ ಆಗಸ್ಟ್ 9ರಿಂದ 19ರ ವರೆಗೆ ಏರ್ಪಡಿಸಲಾಗಿದ್ದ ಶಿವಪಂಚಾಕ್ಷರಿ ಜಪಯಜ್ಞದಲ್ಲಿ ಒಟ್ಟು 111 ಮಂದಿ ಸದಸ್ಯರು ಸುಮಾರು 30 ಲಕ್ಷ ಶಿವಪಂಚಾಕ್ಷರಿ ಜಪ ಪಠಿಸಿದ್ದು, ಇಂದು ಮಹಾಸಭೆಯ ಪ್ರಯುಕ್ತ ಗಣಪತಿ ಹೋಮ ಮತ್ತು ಶಿವಪಂಚಾಕ್ಷರಿ ಹೋಮವನ್ನು ಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ ಶ್ರೀ ಪ್ರತಾಪ್ ಶರ್ಮ, ಶ್ರೀ ಅರವಿಂದ ಶರ್ಮ ಮತ್ತು ಶ್ರೀ ಅಖಿಲೇಶ್ ಭಟ್ ಇವರ ನೇತೃತ್ವದಲ್ಲಿ ನಡೆಸಲಾಯಿತು. ಶ್ರೀ ಜ್ಞಾನಶಕ್ತಿ ಭಜನಾ ಬಳಗದವರು ಭಜನಾ ಕಾರ್ಯಕ್ರಮ ನೀಡಿದರು. ಉಪಾಹಾರದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇವರಿಗೆ ತರಬೇತು ನೀಡಿದ ಕುಮಾರಿ ಶರಣ್ಯ ಗಣೇಶ್ ರಾವ್ ಮಸ್ಕಿಬೈಲ್ ಮತ್ತು ಕುಮಾರಿ ನಮನಾ ಕುಮಾರಸ್ವಾಮಿ ಇವರನ್ನು ಗೌರವಿಸಲಾಯಿತು. ಮಹಾಸಭೆಯ ಅಧ್ಯಕ್ಷತೆಯನ್ನು ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಮಂಜುನಾಥ ರಾವ್ ವಹಿಸಿದ್ದರು. ಅತಿಥಿಗಳಾಗಿ ಶ್ರೀ ಸ್ಥಾನಿಕ ಮಹಾಮಂಡಲ, ಮಂಗಳೂರು ಇದರ ಸ್ಥಾಪಕಾಧ್ಯಕ್ಷರಾದ ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿಗಳಾದ ಡಾ। ಸುದರ್ಶನ ರಾವ್, ಉಪಾಧ್ಯಕ್ಷರಾದ ಶ್ರೀ ಉದಯ ಬಾರ್ಕೂರು, ಪಡುಬಿದ್ರೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಎಂ.ಕೆ.ಮೋಹನ್ ರಾವ್, ಸುರತ್ಕಲ್ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಮಾಧವ ರಾವ್, ಉಡುಪಿ ಜಿಲ್ಲಾ ಬ್ರಾಹ್ಮಣ ಸಭಾದ ಕಾರ್ಯದರ್ಶಿಯಾದ ಶ್ರೀ ಗಣೇಶ್ ರಾವ್ ಕುಂಭಾಶಿ ಆಗಮಿಸಿದ್ದರು.

ತತ್ವಶಾಸ್ತ್ರದಲ್ಲಿ ವಿದ್ವತ್ ಪದವಿ ಪಡೆದ, ಭಗವದ್ಗೀತೆ ಮತ್ತು ಮನೋನಿರ್ವಹಣೆ ಎಂಬ ವಿಷಯದಲ್ಲಿ ಸಂಶೋಧನಾ ಕಾರ್ಯ ನಡೆಸಿ 2019ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿ ಪಡೆದ, ಅಂತರ್ಜಾಲೀಯ ವೇದ ಸಂಸ್ಕೃತ ಶಾಲೆಯನ್ನು ಪ್ರಾರಂಭಿಸಿದ, ರಾಮಾಯಣ, ಮಹಾಭಾರತ, ಭಗವದ್ಗೀತೆ, ತತ್ವಶಾಸ್ತ್ರ, ಉಪನಿಷತ್‌ಗಳ ಭೋಧನೆ ಜತೆಗೆ ಪೂಜಾಕ್ರಮ ಹೋಮ ಹವನಾದಿಗಳ ಭೋಧನೆ ಮಾಡುತ್ತಿರುವ, ಸಂಪೂರ್ಣ ಭಗವದ್ಗೀತೆಯನ್ನು ಕಂಠಪಾಠ ಮಾಡಿ ಅರ್ಥಸಮೇತ ಪಠಿಸಿದ್ದಕ್ಕಾಗಿ ಶೃಂಗೇರಿ ಶ್ರೀ ಜಗದ್ಗುರುಗಳಿಂದ ಆಶೀರ್ವಾದ ರೂಪದಲ್ಲಿ ರೂಪಾಯಿ 21,000/–ವನ್ನು ಪುರಸ್ಕಾರವಾಗಿ ಪಡೆದ ಹೆಗ್ಗಳಿಕೆ ಹೊಂದಿರುವ, ಯಕ್ಷಗಾನ ತಾಳಮದ್ದಳೆಯ ಅರ್ಥಗಾರಿಕೆ, ಧಾರ್ಮಿಕ ಪ್ರವಚನಕಾರರಾದ ಪ್ರಸ್ತುತ ಪುತ್ತೂರಿನ ಅಂಬಿಕಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ವಿದ್ವಾನ್ ಡಾ.ವಿನಾಯಕ ಭಟ್ಟ ಗಾಳಿಮನೆ ಇವರಿಂದ "ಬ್ರಾಹ್ಮಣ್ಯ ಮತ್ತು ಜವಾಬ್ದಾರಿಗಳು" ಎಂಬ ವಿಚಾರದ ಕುರಿತು ಅತ್ಯುತ್ತಮ ಉಪನ್ಯಾಸ ಏರ್ಪಡಿಸಲಾಗಿತ್ತು. ಗಾಯತ್ರಿ ಮಂತ್ರ ಪಠಣದ ಮಹತ್ವ, ಅಂದಿನ ಆಚಾರ ಮತ್ತು ಇಂದಿನ ವಿಚಾರಗಳ ಅಗತ್ಯತೆ, ಬ್ರಾಹ್ಮಣ ಸಮಾಜದ ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಸಂಪತ್ತಿನ ಬೆನ್ನುಹತ್ತಿದ ಯುವಜನಾಂಗದವರ ಬದುಕು ಸಂಧ್ಯಾವಂದನೆಯನ್ನೂ ಕೈಬಿಟ್ಟು, ಆಧುನಿಕತೆಯ ಹೆಸರಿನಲ್ಲಿ ಸಂಪ್ರದಾಯವನ್ನು ಮರೆತು ಬಿಸಿಲಕುದುರೆಯೇರಿ ಅದೇನೋ ಸಾಧಿಸಿರುವೆನೆಂಬ ಭ್ರಮೆಯಲ್ಲಿ ಹಳಿತಪ್ಪಿದ ರೈಲಿನ ಬೋಗಿಯಂತಾಗುತ್ತಿರುವುದು ವಿಪರ್ಯಾಸವೆಂದರು. ಜಗತ್ತಿಗೇ ಎಲ್ಲವನ್ನೂ ನೀಡಿರುವ ನಮ್ಮ ಭಾರತೀಯ ಸಂಸ್ಕೃತಿಯು ಈಗ "ಎಲ್ಲವನ್ನೂ ಅರಿತಿರುವಲ್ಲಿ ಆಚಾರವೊಂದೇ ಬಾಕಿ" ಎಂಬ ಮಟ್ಟ ತಲುಪಿದ್ದು ಎಚ್ಚರಿಕೆಯ ಗಂಟೆಯೇ ಸರಿಯೆಂಬುದನ್ನು ಮನೋಜ್ಞವಾಗಿ ವಿವರಿಸಿದರು.

ಮಹಾಮಂಡಲದ ಉಪಾಧ್ಯಕ್ಷರಾದ ಶ್ರೀ ಉದಯ ಬಾರ್ಕೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಜತೆ ಕಾರ್ಯದರ್ಶಿಯಾದ ಶ್ರೀ ರವೀಂದ್ರ ರಾವ್ ವಾರ್ಷಿಕ ವರದಿಯನ್ನು ವಾಚಿಸಿದರು. ಖಜಾಂಚಿ ಶ್ರೀ ಭಾಸ್ಕರ ಹೆಬ್ಬಾರ್ ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿ ಅನುಮೋದನೆ ಪಡೆದುಕೊಂಡರು. ಕಾರ್ಯಕ್ರಮದ ಊಟೋಪಚಾರದ ಪ್ರಾಯೋಜಕರಾದ ಮಂದಾರ್ತಿ ಕಲ್ಲುದೇವಸ್ಥಾನದ ಶ್ರೀ ಶಂಭು ಶಂಕರ ರಾವ್ ದಂಪತಿಗಳು ಹಾಗೂ ಇತರ ಪ್ರಾಯೋಜಕರಾದ ಪಿ. ಜಯರಾಮ ರಾವ್ ಮಸ್ಕಿಬೈಲ್, ಸತೀಶ್ ರಾವ್ ಕೂಡ್ಲಿ, ರವೀಂದ್ರ ರಾವ್ ಬಾರ್ಕೂರು, ಜಯರಾಮ ರಾವ್ ಬಾರ್ಕೂರು, ಕುಮಾರಸ್ವಾಮಿ ಬಿ.ಆರ್ ಚೌಳಿಕೆರೆ ಬಾರ್ಕೂರು, ನೀಲಕಂಠ ರಾವ್ ಹವರಾಲು, ಉದಯ ಬಾರ್ಕೂರು, ಮಂಜುನಾಥ ರಾವ್ ಕೋಟೆಕೆರೆ, ವಿನೋದ್ ರಾವ್ ಮಂದಾರ್ತಿ, ಗಿರೀಶ್ ರಾವ್ ತಂತ್ರಾಡಿ, ಸ್ಫೂರ್ತಿ ಮಂದಾರ್ತಿ ಇವರುಗಳನ್ನು ಸನ್ಮಾನಿಸಲಾಯಿತು. ಸಂಘದ ಪೋಷಕರಾದವರನ್ನು ಮತ್ತು ಪ್ರದಾತೃ ಸದಸ್ಯತ್ವ ಪಡೆದವರನ್ನು ಗುರುತಿಸಲಾಯಿತು. ಅತಿಥಿಗಳಾದ ಶ್ರೀಯುತ ಸಿ.ಎಸ್.ರಾವ್, ಡಾ। ಸುದರ್ಶನ್ ರಾವ್ ಸಂದರ್ಭೋಚಿತವಾಗಿ ಮಾತನಾಡಿ ಸಂಘಕ್ಕೆ ಶುಭಹಾರೈಸಿದರು. ಸ್ಥಾನಿಕ ಸಮಾಜ ಬಾಂಧವರ ಹಲವಾರು ಸಂಘಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನದ ಭೋಜನದ ಬಳಿಕ ಕಾರ್ಯಕ್ರಮ ಸಮಾಪನಗೊಂಡಿತು. ಶ್ರೀಮತಿ ನಾಗರತ್ನ ಹೆಬ್ಬಾರ್, ಶ್ರೀಮತಿ ಗೌರಿ ಎಸ್.ರಾವ್ ಮತ್ತು ಶ್ರೀಮತಿ ಜಲಜ ಹೆಬ್ಬಾರ್ ಪ್ರಾರ್ಥಿಸಿದರು. ಪಿ.ಜಯರಾಮ ರಾವ್ ಸ್ವಾಗತಿಸಿದರು. ಗಣೇಶ್ ರಾವ್ ದಾನಿಗಳು ಮತ್ತು ಪೋಷಕರ ಪಟ್ಟಿ ವಾಚಿಸಿದರೆ, ಶ್ರೀಮತಿ ಚಂದ್ರಿಕಾ ಕಲಿಕಾ ಸಾಮಾಗ್ರಿ ಪಡೆಯುವವರ ಪಟ್ಟಿ ವಾಚಿಸಿದರು. ಶ್ರೀಮತಿ ಗೌರಿ ಎಸ್ ರಾವ್ ಹಾಗೂ ಶ್ರೀಮತಿ ಸ್ಮಿತಾ ಕಾಶಿನಾಥ ರಾವ್ ಸಾಂಸ್ಕೃತಿಕ ಕಾರ್ಯಕ್ರಮ ನಿರೂಪಿಸಿದರು. ಗಿರೀಶ್ ರಾವ್ ವಂದಿಸಿದರು. ಶ್ರೀಮತಿ ಸವಿತಾ ಎರ್ಮಾಳ್ ಸಭಾ ಕಾರ್ಯಕ್ರಮ ನಿರೂಪಿಸಿದರು.

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.), ಉಡುಪಿ : ಬ್ರಹ್ಮಾವರ ಶಾಖೆಯ ಉದ್ಘಾಟನೆ





ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.), ಉಡುಪಿ ಇದರ ನಾಲ್ಕನೇ ಶಾಖೆಯನ್ನು ಬ್ರಹ್ಮಾವರದಲ್ಲಿ ದಿನಾಂಕ 07.11.2021ರಂದು ಚಾಂತಾರು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಮೀರಾ ಸದಾನಂದ ಪೂಜಾರಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಬಳಿಕ ಚಾಂತಾರು ಪಂಚಾಯತ್ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕುಂದಾಪುರದ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಅರುಣ್ ಕುಮಾರ್ ಎಸ್ ವಿ ನೂತನ ಶಾಖೆಗೆ ಶುಭ ಹಾರೈಸುತ್ತಾ, ಸಹಕಾರೀ ತತ್ವಗಳು ಸಮಾಜದ ಎಲ್ಲಾ ವರ್ಗಕ್ಕೂ ಲಭಿಸುವಂತಾಗಲಿ, ಅದಕ್ಕಾಗಿ ಸೊಸೈಟಿಯ ಎಲ್ಲಾ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಶ್ರಮಿಸಬೇಕೆಂದರು. ಅತಿಥಿಗಳಾಗಿ ಆಗಮಿಸಿದ್ದ ಬ್ರಹ್ಮಾವರ ತಾಲೂಕಿನ ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾದ ಆಧ್ಯಕ್ಷ ಶ್ರೀ ಬಿ.ಮಂಜುನಾಥ ರಾವ್, ಬ್ರಹ್ಮಾವರ ತಾಲೂಕು ಬ್ರಾಹ್ಮಣ ಮಹಾ ಸಭಾದ ಅಧ್ಯಕ್ಷ ಶ್ರೀ ಅಶೋಕ್ ಭಟ್, ಕಟ್ಟಡ ಮಾಲೀಕರಾದ ಶ್ರೀ ವೆಂಕಟರಮಣ ಶೆಟ್ಟಿ ಎಚ್, ಬ್ರಹ್ಮಾವರ ಶಾಖೆಯ ಸಲಹಾಗಾರರಾದ ಶ್ರೀ ಬಿ.ಉದಯರಾವ್ ಬಾರ್ಕೂರು ಮೊದಲಾದವರು ವೇದಿಕೆಯಲ್ಲಿದ್ದು ಫಲಾನುಭವಿಗಳಿಗೆ ಶ್ರೀ ಶಾರದಾ ನಗದು ಪತ್ರ, ಪಾಲುಭಂಡವಾಳ ಪ್ರಮಾಣಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಂ.ಸದಾನಂದ ರಾವ್ ಸ್ವಾಗತಿಸಿದರು. ಉಪಾಧ್ಯಕ್ಷ ಶ್ರೀ ಅರವಿಂದಕುಮಾರ್ ಸೊಸೈಟಿಯು ಕಳೆದ 20 ವರ್ಷಗಳಿಂದ ನಡೆದುಕೊಂಡು ಬಂದ ದಾರಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಶಾಖಾ ಪ್ರಬಂಧಕರಾದ ಶ್ರೀಮತಿ ಭಾರತೀ ಎಸ್.ರಾವ್ ಫಲಾನುಭವಿಗಳ ಪಟ್ಟಿ ವಾಚಿಸಿದರು. ಸೊಸೈಟಿಯ ಕಾರ್ಯದರ್ಶಿ ಶ್ರೀ ಪಟ್ಟಾಭಿರಾಮರಾವ್ ವಂದನಾರ್ಪಣೆ ಮಾಡಿದರು. ನಿರ್ದೇಶಕ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು.


PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990



Dr. Vijaya Rao Y.B.
MBBS DGO (DNB)
Consultant Obst. & Gynaecologist
Reg. No. 34499
ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು
Mobile : 9481230608
Email : vijayayb12@gmail.com
Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ


Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org